## ಕಾರವಾರದ ಮಧುರ ನೆನಪು

ರಾಜೀವ ನಾರಾಯಣ ನಾಯಕ ಅವರ 'ಪ್ರೀತ್‌ಸು' ಧಾರಾವಾಹಿ ಸೂಪರ್ ಆಗಿ ಮೂಡಿ ಬಂದಿದೆ. 80ರ ದಶಕದಲ್ಲಿ ಕಾರವಾರದಲ್ಲಿ ಡಿಪ್ಲೊಮಾ ಓದುವಾಗ, ಹಾಸ್ಟೆಲಿನಲ್ಲಿ ಅರೆಬರೆ ಬೇಯಿಸಿದ ಉಪ್ಪಿಟ್ಟು ತಿನ್ನುವಾಗ, ಮನೆಯ ಬೆಳಗಿನ ತಿಂಡಿ ತೆಳ್ಳವು (ಹವ್ಯಕರ ನೀರು ದೋಸೆ) ಸಿಗದೆ ಅಕ್ಕನಿಗೆ ಪತ್ರದಲ್ಲಿ – 'ನಾ ನೋಡಿ ಅಳುವ ಕಾರವಾರ, ಓ ಕಾರವಾರ ಬೇಸರದ ಶಹರ' ಎಂದು ಬರೆದಿದ್ದೆ.

ನಂತರದ ದಿನಗಳಲ್ಲಿ ಕಾರವಾರದ ಬೀಚನ್ನು ನನ್ನ ಸ್ನೇಹಿತ ಮೊಹಿದ್ದೀನ್‌ನೊಂದಿಗೆ ಹೆಜ್ಜೆ ಹಾಕಲು ಪ್ರಾರಂಭಿಸಿದ ನಂತರ ಕಾರವಾರವನ್ನು ಪ್ರೀತಿಸತೊಡಗಿದೆ. ಹಿಂದಿ, ಕೊಂಕಣಿ ಭಾಷೆಗಳನ್ನೂ ಕಲಿತೆ. ವಿದ್ಯಾಭ್ಯಾಸದ ನಂತರ ಊರು ಬಿಡಬೇಕಾದಾಗ ಅತ್ತಿದ್ದೂ ಆಯಿತು. ಈಗ ಮತ್ತೆ ಎಲ್ಲ ನೆನಪುಗಳು ಅಲೆಗಳಂತೆ ಬರುವಂತೆ ಮಾಡಿದ 'ಸುಧಾ' ಪತ್ರಿಕೆಗೆ ಧನ್ಯವಾದಗಳು.

–ಎನ್.ವಿ. ಭಟ್, ಶಿವಮೊಗ್ಗ

## ಗುರುವಾರಕ್ಕಾಗಿ ಕಾಯುತ್ತಿದ್ದೆ!

ಕಾದಂಬರಿ ತುಂಬ ಚೆನ್ನಾಗಿ ಮೂಡಿಬಂದಿದೆ. ಪ್ರತಿ ಗುರುವಾರ ಯಾವಾಗ ಬರುತ್ತೋ ಎಂದು ಕಾಯುತ್ತಿದ್ದೆ.

–ನೀಲಮ್ಮ ಕುಮಾರಪ್ಪ, ಲಿಂಗಸಗೂರು

## ಕೂರ್ಮಘಡ ಜಾತ್ರೆಯ ನೆನಪು

ಧಾರಾವಾಹಿ ತುಂಬಾ ಚೆನ್ನಾಗಿತ್ತು. ಲೇಖಕರು ಕಾರವಾರದ ಕಡಲನ್ನು ಕಣ್ಣಿಗೆ ಕಟ್ಟುವಂತೆ ಸೊಗಸಾಗಿ ವರ್ಣಿಸಿದ್ದಾರೆ. ಕಥೆಯ ಮುಕ್ತಾಯ ರೋಮಾಂಚಕ. ನಾವು ಕಾರವಾರದಲ್ಲಿ ಇದ್ದಾಗ ಕೂರ್ಮಘಡ ಜಾತ್ರೆಗೆ ಹೋಗಿ ವಾಪಾಸು ಬರುವಾಗ ದೋಣಿಯಲ್ಲಿ ಜನ ಜಾಸ್ತಿಯಾಗಿ ಭಯದಿಂದಲೇ ದಡ ಸೇರಿದ ಕೆಲವು ವರ್ಷಗಳ ಹಿಂದೆ ನಡೆದ ಘಟನೆಯನ್ನು ಧಾರಾವಾಹಿ ನೆನಪಿಸಿತು.

–ಸುಮಿತ್ರ ನಾರಾಯಣ, ಶಿವಮೊಗ್ಗ

## ಬೇಗ ಮುಗಿದಿದ್ದಕ್ಕೆ ಬೇಸರ

ಧಾರಾವಾಹಿ ಬೇಗ ಮುಗಿಸಿದಕ್ಕೆ ಬಹಳ ಬೇಸರವಾಯಿತು. ಸುಮಿ ಮತ್ತು ಪ್ರೀತಂರವರ ಪ್ರೀತಿಗೆ ಜಯ ಸಿಕ್ಕಿದೆ. ಅವರ ಸಾಧನೆಗೆ ಅಭಿನಂದನೆಗಳು. 'ಅಳುವ ಕಡಲೊಳು ತೇಲಿ ಬರುತಲಿದೆ ನಗೆಯ ಹಾಯಿ ದೋಣಿ' ಎಂಬ ಕವಿಗಳ ವಾಣಿ ನೆನಪಲ್ಲಿ ಹಾಗೇ ಉಳಿಯುತ್ತೆ.

–ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

## ಕಡಲಿನ ಅಲೆಯ ತರಹ

ಶೈಲತ್ತೆ ಪಾತ್ರ ನಿರೂಪಣೆಯು ಚೆನ್ನಾಗಿದೆ. ತನ್ನ ಅಂತರಂಗದ ನೋವನ್ನು ಬದಿಗೆ ಸರಿಸಿ ಮಕ್ಕಳ ಪ್ರೀತಿಯನ್ನು ಒಂದಾಗಿಸಿದ ಮಹತ್ವದ ನಿರ್ಧಾರ ಕೈಗೊಳ್ಳುವ ಮೂಲಕ ಪಾತ್ರದ ಘನತೆಯನ್ನು



# ಪ್ರತಿಕ್ರಿಯೆ

ಹೆಚ್ಚಿಸಿದ್ದಾರೆ. ಒಂದು ಸಿನಿಮಾ ನೋಡಿದ ಅನುಭವ ಆಯಿತು. ಬಯಲು ಸೀಮೆಯ ಮತ್ತು ಕಡಲ ತೀರದ ಸೇರುವಿಕೆ ಸುಂದರವಾಗಿ ಮೂಡಿ ಬಂದಿದೆ.

–ಕಮಲಾದೇವಿ ರಾಜಶೇಖರ ಹಳೂರ್, ಬೆಂಗಳೂರು

## ಸಿನಿಮಾ ಮಾಡಬಹುದು!

ಕಚಗುಳಿ ಇಡುವ ಹದಿಹರಯದವರ ಪ್ರೀತಿಯ ಪಲುಕು; ಉತ್ತರ ಕರ್ನಾಟಕದ ಜಮೀನುದಾರರ, ಕರಾವಳಿಯ ಮೀನುಗಾರರ ಬದುಕಿನ ರೀತಿ ರಿವಾಜುಗಳ ಝಲಕು; ಕಲಬುರ್ಗಿ–ಕಾರವಾರ–ಬೆಂಗಳೂರು ಭಾಗದ ಜನರಾಡುವ ಸವಿಗನ್ನಡದ ಹದವಾದ ಮಿಶ್ರಣ ಹಾಗೂ ಅನಿರೀಕ್ಷಿತ, ಆಕಸ್ಮಿಕ ಘಟನೆಗಳನ್ನೊಳಗೊಂಡ ಧಾರಾವಾಹಿ ಮನಸ್ಸಿಗೆ ಮುದ ನೀಡಿತು. ಇದು ಒಂದು ಉತ್ತಮ ಸಿನಿಮಾ ಮಾಡಬಹುದಾದ ಕಥೆ. ಕಾದಂಬರಿಯ ಓರ್ವ ಪಾತ್ರಧಾರಿ ನಾಗತಿಹಳ್ಳಿ ಚಂದ್ರಶೇಖರ್ ಅವರೇ ಸಿನಿಮಾ ಮಾಡಬಹುದು.

–ಎಚ್.ಎಸ್. ನಂದಕುಮಾರ್, ಮಂಗಳೂರು

## ಸುಖಾಂತ್ಯ ತಂದ ಖುಷಿ

ಪ್ರೇಮಕಥೆ ಬಹಳ ಚೆನ್ನಾಗಿದೆ. ಕಡಲು ತೀರದ ಹುಡುಗ, ಬಯಲು ಸೀಮೆಯ ಹುಡುಗಿ, ಪ್ರೀತಿಗೆ ಬಿದ್ದು ಕಷ್ಟಪಟ್ಟರೂ, ಆಕಸ್ಮಿಕವಾಗಿ ನಾಗತಿಹಳ್ಳಿ ಚಂದ್ರಶೇಖರ್ ಅವರ ಕಣ್ಣಿಗೆ ಬಿದ್ದು, ಸಿನಿಮಾ ಸ್ಟಾರ್ ಆಗಿದ್ದು ಖುಷಿ ಆಯ್ತು.

ಇದುವರೆಗೂ ನಾವು ಓದಿದ ಕಥೆಗಳಲ್ಲಿ ದುಃಖಾಂತ್ಯವೇ ಹೆಚ್ಚು. ಇದು ಸುಖಾಂತ್ಯ ಕಂಡದ್ದು ಖುಷಿ ಆಯ್ತು. ಆದರೆ ಬೋಟ್ ಮುಳುಗಿ ಶೈಲತ್ತೆ ಸತ್ತದ್ದು ತುಂಬಾ ಬೇಸರವಾಯಿತು. 'ಓದಿ ಏನಾದರೂ ಸಾಧಿಸಿ, ನಂತರ ಮದುವೆ' ಎಂಬ ಸಂದೇಶವನ್ನು ಈ ಕಥೆ ನೀಡಿದೆ.

–ಜಯಲಕ್ಷ್ಮಿ ಉಪಾಧ್ಯಾಯ, ಕಂಚಾರ್ತಿ

## ಶೈಲತ್ತೆ ಪಾತ್ರ ಹಿಡಿಸಿತು

ಶೈಲತ್ತೆಯ ಪಾತ್ರ ತುಂಬಾ ಹಿಡಿಸಿತು. ಪ್ರತಿ ಕುಟುಂಬದಲ್ಲಿಯೂ ಶೈಲತ್ತೆಯಂಥವರು ಹುಟ್ಟಿಬರಲಿ. ಶೈಲತ್ತೆಯ ದಾರುಣ ಸಾವು ನೋವು ತಂದಿತು.

–ನವ್ಯ ಶಿವದೇವ ಮೊಗಟಾ, ಯಲ್ಲಾಪುರ

## ಒಳ್ಳೆಯ ಕಾದಂಬರಿ

ಪ್ರಾರಂಭದಿಂದ ಕೊನೆಯವರೆಗೂ ಓದುಗರನ್ನು ಹಿಡಿದಿಟ್ಟುಕೊಳ್ಳುವಲ್ಲಿ ಕಾದಂಬರಿ ಯಶಸ್ವಿಯಾಗಿದೆ. ಪ್ರೇಮಕಥೆಯನ್ನು ಒಳಗೊಂಡ ಈ ಕಾದಂಬರಿ ತನ್ನ ಕಥೆಯ ಜೊತೆಗೆ ಪ್ರಾದೇಶಿಕ ಭಾಷೆ, ವಿವಿಧ ವಿಷಯಗಳ ಹೂರಣ, ಅನೇಕ ಪ್ರದೇಶಗಳ ಮಾಹಿತಿ, ಕಳೆದುಹೋಗುತ್ತಿರುವ ಕನ್ನಡ ಪದ ಹಾಗೂ ಗಾದೆಗಳನ್ನು ಲೇಖಕರು ನೆನಪಿಸಿದ್ದು ಗಮನ ಸೆಳೆಯಿತು. ಬಹಳ ದಿನಗಳ ನಂತರ ಒಳ್ಳೆಯ ಕಾದಂಬರಿ ಓದಿದ ಹಾಗೆ ಅನಿಸಿತು.

–ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

## ಇಷ್ಟವಾದ ಕಥೆ

ತುಂಬ ನವಿರಾಗಿ ಓದಿಸಿಕೊಂಡು ಹೋದ ಇಷ್ಟವಾದ ಕಥೆ. ಗ್ರಾಮೀಣ ನುಡಿಗಟ್ಟು, ಭಾಷೆ, ಭಾಷೆಯೊಂದಿಗಿನ ಪರಿಸರದ ವಿವರಣೆ, ಶೈಲತ್ತೆಯಂತಹ ವಿಶಿಷ್ಟ ಪಾತ್ರ ಚಂದ.

–ಅಕ್ಷತಾ ಕೃಷ್ಣಮೂರ್ತಿ, ಅಣಶಿ

## ಯಾಕಷ್ಟು ಅವಸರ?

ಬರೇ ಒಂಬತ್ತು ಕಂತುಗಳಲ್ಲಿ ಕಾದಂಬರಿ ಮುಗಿದೇಹೋಗಿದೆ. ಕಾರವಾರ ಮತ್ತು ಗುಲ್ಬರ್ಗ ನಗರಗಳ ಚಿತ್ರಣ ಸುಂದರವಾಗಿತ್ತು. ಪ್ರೀತಿ ಮತ್ತು ದ್ವೇಷವನ್ನು ತುಂಬಾ ನೈಜವಾಗಿ ವಿವರಿಸಿದ್ದಾರೆ. ನಾವು ಇನ್ನೂ ರೋಮಾಂಚಕಾರಿಯಾಗಿ ಮೂಡಿಬರುತ್ತದೆ ಎಂದು ಕಾಯುತ್ತಿದ್ದೆವು. ಆದರೆ ಅವಸರದಲ್ಲಿ ಧಾರಾವಾಹಿ ಮುಗಿದೇ ಹೋಯಿತು.

–ಪಿ.ಹೆಚ್. ಪಾಟೀಲ್, ರಾಣೆಬೆನ್ನೂರ

## ಹೊಸತನವೇನೂ ಇಲ್ಲ

ಸಿನಿಮಾಕ್ಕೆ ವಸ್ತುವಾಗುವಂಥ, ಜಾಳುಜಾಳಾದ ಕಥೆಯ 'ಪ್ರೀತ್‌ಸು'ನಲ್ಲಿ ಹೊಸತನವೇನೂ ಕಾಣಲಿಲ್ಲ. ಅದರಲ್ಲೂ ನಾಗತಿಹಳ್ಳಿ ಚಂದ್ರಶೇಖರ ಪಾತ್ರದ ಪ್ರವೇಶದಿಂದಾಗಿ ಸೊಬಗು ಕಳೆದುಕೊಂಡು ಕಾದಂಬರಿ ಸಪ್ಪೆ ಅನಿಸಿತು.

–ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

## ವರ್ಣನೆಯ ಸೊಗಸು

ಧಾರಾವಾಹಿಯು ಹೊಸತನವಿಲ್ಲದೆ ನೀರಸವಾಗಿದ್ದರೂ, ಕಡಲ ವರ್ಣನೆ ಹಾಗೂ ಕರಾವಳಿಯ ಭಾಷಾ ಸೊಗಸು ಚೆನ್ನಾಗಿತ್ತು.

–ಭಾರತೀ ಗಂಗಾಧರ್

## ರೋಚಕ ಕ್ರಿಕೆಟ್ ಮ್ಯಾಚ್‌ನಂತೆ!

ಧಾರಾವಾಹಿಯಲ್ಲಿ ಬೆಸ್ತರ ಜೀವನ, ಮೀನಿನ ಹೆಸರು ಬಳಸಿದ್ದು ಮುದ ನೀಡಿತು. ರೋಚಕ ಕ್ರಿಕೆಟ್ ಮ್ಯಾಚ್‌ನಂತೆ ಕಥೆ ಮುಗಿದೇಹೋಯಿತು.

–ಕೆ.ಎಂ.ಡಿ. ಭಟ್ಟ, ಶಿರಸಿ